ಎಸ್.ವಿ. ಶ್ರೀನಿವಾಸ್, ಮೈಸೂರು

*ಸಸ್ಯಾಹಾರಿ ಹೊಟೇಲುಗಳಲ್ಲಿ ಮಾಣಿ ತಿಂಡಿಗಳ ಹೆಸರನ್ನು ಇಡ್ಲಿ, ವಡೆಯಿಂದಲೇ ಪ್ರಾರಂಭಿಸುವುದು ಏಕೆ?*



ಇಡ್ಲಿ ಸಾತ್ವಿಕ; ವಡೆ ತಾಮಸಿಕ; ಮಸಾಲೆದೋಸೆ ರಾಜಸಿಕ; ಸಾತ್ವಿಕದಿಂದ ರಾಜಸಿಕಕ್ಕೆ ಹೋಗುವುದೇ ವೈಭೋಗ.

ಎಸ್.ಎನ್. ಮಹಾಬಲರಾವ್, ಎನ್ನಾರ್ ಪುರ

*ಮಾಡಿ ಬೈಸಿಕೊಳ್ಳಲೋ, ಮಾಡದೆ ಬೈಸಿಕೊಳ್ಳಲೋ?*

ಛುಪ್! ವಿವಾಹಿತರಿಗೆ ಇಂತಹ ಆಯ್ಕೆಗಳಿಲ್ಲ; ಕರ್ಮಣ್ಯೇವಾಧಿಕಾರಸ್ತೇ ಬೈಗಳುಂಟು ಪ್ರತಿ ದಿನ.

ವೀಣಾ ಶರ್ಮ, ಬೋಸ್ಮಾನಹಳ್ಳಿ

*ಅಣ್ಣಯ್ಯ, ಫಿಟ್ಟಿಂಗ್ ಇಡೋದು ಅಂದರೇನು?*

ಉತ್ತರಕ್ಕೆ ಯಾವುದೇ ಸೀರಿಯಲ್‌ನ ಅತ್ತೆ, ಸೊಸೆ, ನಾದಿನಿಯರ ನಡವಳಿಕೆಗಳನ್ನು ಗಮನಿಸಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ನಿದ್ರೆಗೂ ಟ್ಯಾಕ್ಸ್ ಇದ್ದಿದ್ದರೆ ಹೇಗಿರುತ್ತಿತ್ತು ರಾಮ್ ಸರ್?*



ಕಣ್ಣು ಮುಚ್ಚಿದ್ದರೂ ತೆರೆದಂತೆ ಕಾಣುವಂತೆ ರೆಪ್ಪೆಯ ಮೇಲೆ ಪೇಂಟ್ ಮಾಡಿಕೊಳ್ಳಲಾಗುತ್ತಿತ್ತು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಕಿರುತೆರೆಯ ಧಾರಾವಾಹಿಗಳು ಈ ಸಮಾಜಕ್ಕೆ ನೀಡುವ ಸಂದೇಶವಾದರೂ ಏನು ರಾಂ?*

ಜೀವನದಲ್ಲಿ ಗೋಳು ಕಡಿಮೆಯಾಗಬೇಕಾದರೆ ಟಿವಿ ಬಿಡಿ, ಪುಸ್ತಕ ಓದಿ ಎಂಬ ಪರೋಕ್ಷ ಸಂದೇಶ.

ಕುಮಾರ ಚಲವಾದಿ, ಹಾಸನ

*ದೇವರು ಎಲ್ಲರಲ್ಲೂ ಇರುತ್ತಾನೆಂದರೆ ರಾಜಕಾರಣಿಯಲ್ಲೂ ಇರಬೇಕಲ್ಲ! ಆದರೂ ಅವರೇಕೆ ಹಾಗೆ ವರ್ತಿಸುತ್ತಾರೆ?*

ಅವರು ದೇವನಿಗೆ ಶಯನೋತ್ಸವ ಮಾಡಿಸಿರುತ್ತಾರೆಯೇ ವಿನಹ ಸುಪ್ರಭಾತ ಹಾಡುವುದೇ ಇಲ್ಲವಾದ್ದರಿಂದ.

ಕೆ. ಚಂದ್ರಶೇಖರ, ಕೋಣನಕುಂಟೆ

*ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುವುದೆ ಜೀವನ ಎನ್ನುವುದಕ್ಕೆ ರಾಜಕಾರಣಿಗಳೇಕೆ ಹೊರತು?*

ಇಲ್ಲವಲ್ಲ; ಇರುವ ಮಾನ, ಮರ್ಯಾದೆ, ನಾಚಿಕೆಗಳನ್ನು ಬಿಟ್ಟೇ ಅವರು ಗಾದಿಯತ್ತ ತುಡಿಯುವುದು.

ದೇವೇಂದ್ರ, ಕಡೂರು

*ಬದುಕಿನಲ್ಲಿ ನೆಮ್ಮದಿಯಾಗಿ ಜೀವನ ಮಾಡಲು ಹಣವೇ ಮುಖ್ಯವಲ್ಲವಂತೆ?*

ಈ ಮಾತನ್ನು ಹಣದ ಕೊಪ್ಪರಿಗೆಯ ಮೇಲೆ ಕುಳಿತೇ ಹೆಚ್ಚಾಗಿ ಹೇಳುವುದಂತೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಹ್ಯಾಪಿ ಸಂಕ್ರಾಂತಿ, ಹ್ಯಾಪಿ ಯುಗಾದಿ ಹೇಳಿದಹಾಗೆ ಹ್ಯಾಪಿ ಗ್ರಹಣ ಹೇಳುವುದಿದ್ದಿದ್ದರೆ...?*

ಈಗಲೂ ಹೇಳುವರಲ್ಲಾ.... ಹ್ಯಾಪಿ ಪಾಣಿಗ್ರಹಣ!

ಭಾರತಿ ಮಾನಗೆ, ಹೊನ್ನಾವರ

*ಸರ್ಕಾರಿ ನೌಕರರಿಗೆ ಐದು ದಿನದ ಕೆಲಸ ಸೂಕ್ತವೆ?*

ಸೂಕ್ತವಲ್ಲವಂತೆ. ಐದು ದಿನದ ರಜೆ ಕೊಡಿ ಎನ್ನುತ್ತಿದ್ದಾನೊಬ್ಬ ನೌಕರ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ನಿಧನವೆಂದರೆ ಸಾವು; ನಿಧನ ಎಂದರೆ ಧನವಿಲ್ಲದವನು; ಇವೆರಡರಲ್ಲಿ ಯಾವ ಅರ್ಥ ಸರಿ?*

ಎರಡರ ಕಾಂಬಿನೇಷನ್ನೂ ಸರಿಯೇ; ಆಧುನಿಕ ಯುಗದಲ್ಲಿ ಧನವಿಲ್ಲದವನು ಸತ್ತಂತೆಯೇ ಸೈ.

ಜಿ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಸ್ತ್ರೀಯರು ಮುಖದಲ್ಲಿ ಧರಿಸಬಹುದಾದ ಅತ್ಯುತ್ತಮ ಆಭರಣಗಳು ಯಾವುವು?*

ತುಟಿಯಲ್ಲಿ ಮುಗುಳ್ನಗೆ, ಕಣ್ಣಲ್ಲಿ ವಾತ್ಸಲ್ಯ, ಮುಖಭಾವದಲ್ಲಿ ಆತ್ಮವಿಶ್ವಾಸ.

## ಬಹುಮಾನಿತ ಪ್ರಶ್ನೆ

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಬೆಳಕಿಗೂ, ಕತ್ತಲಿಗೂ ಎಷ್ಟು ದೂರ?*

ರೆಪ್ಪೆಯಷ್ಟು; ರೆಪ್ಪೆ ತೆರೆದರೆ ಬೆಳಕು, ಮುಚ್ಚಿದರೆ ಕತ್ತಲು.

ಬೂಕನಕೆರೆ ವಿಜೇಂದ್ರ, ಮೈಸೂರು

*ಕನ್ನಡ ಸಾಹಿತಿಗಳ ಮಕ್ಕಳು ಕಾನ್ವೆಂಟ್‌ಗೆ ಹೋಗುತ್ತಾರಲ್ಲ...?*

ಮಕ್ಕಳು ಕನ್ನಡ ಕಲಿತು ಘೋರ ವಿಮರ್ಶಕರಾಗಿಬಿಟ್ಟಾರೆಂಬ ಅಪ್ಪನ ಭಯವೇ ಇದಕ್ಕೆ ಕಾರಣವಂತೆ.

ಪೇಂಟರ್ ಪಾಪು, ಸಂತೇಮರಹಳ್ಳಿ

*ಪ್ರೀತಿ, ಕೆಮ್ಮು, ನಗಡಿಗಳನ್ನು ತಡೆಯಲು ಸಾಧ್ಯವಿಲ್ಲ. ಯಾಕೆ?*

ತಡೆಯಲು ಯತ್ನಿಸಿದರೆ ಒತ್ತರಿಸಿ ಬಂದು ಹೃದಯಕ್ಕೇ ತೊಂದರೆ ಕೊಡುವುದರಿಂದ.

ಬೆಳ್ಳಾವೆ, ಬೆಂಗಳೂರು

*ಸಂಬಂಧಗಳು ಗಟ್ಟಿಯಾಗಬೇಕಾದರೆ ಸಂಪಾದನೆ ಗಟ್ಟಿಯಾಗಿರಬೇಕೆ?*



ಶೂನ್ಯ ಸಂಪಾದನೆಯ ತಾತ–ಮೊಮ್ಮಕ್ಕಳ ಸಂಬಂಧವೂ ಗಟ್ಟಿ ಇರುತ್ತದಲ್ಲ; ಪ್ರೀತಿಯೇ ಸಂಬಂಧಗಳ ಗೋಂದು.

ಬಿ. ಚಂದ್ರೇಗೌಡ, ಬೆಂಗಳೂರು

*ಮನಸ್ಸು ಸದಾ ಸಕಾರಾತ್ಮಕವಾಗಿಯೇ ಯೋಚಿಸಲು ಏನು ತಂತ್ರ ಅನುಸರಿಸಬೇಕು?*

ನಕಾರಾತ್ಮಕ ಭಾವನೆಗಳತ್ತ ನಕಾರಾತ್ಮಕ ಧೋರಣೆ ಬೆಳೆಸಿಕೊಳ್ಳಬೇಕು.

ಶಿವಮೊಗ್ಗ ರಮೇಶ್, ಮೈಸೂರು

*ಕೋತಿಯನ್ನು ಆಡಿಸುವವನಿಗೂ, ಸ್ಪರ್ಧಿಗಳನ್ನು ತನ್ನಿಚ್ಛೆಯಂತೆ ಆಡಿಸುವ ಬಿಗ್ ಬಾಸ್‌ಗೂ ವ್ಯತ್ಯಾಸವೇನು?*

ಕೋತಿ ಆಡಿಸುವವನು ಕೋತಿಗೆ ಮಾನವನಂತೆ ವರ್ತಿಸಲು ಆದೇಶಿಸುತ್ತಾನೆ.

■ ರಾಮ್